<u>ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ.</u>

ಸಿ.ಸಿ. ನಂ– 631/2023

PW–1

<u>ದಿನಾಂಕಃ 24.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀ ಸವಾಲುಃ ಆರೋಪಿ ಶ್ರೀ. ಎಸ್.ಸಿ.ಕೆ. ವಕೀಲರಿಂದ–** ನಾನು 9 ನೇ ತರಗತಿವರೆಗೆ ಶಾಲೆ ಕಲಿತಿದ್ದೇನೆ. ನಾನು ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇನೆ. ನನ್ನ ಹೆಂಡತಿಯ ಹೆಸರು ಹೊನ್ನವ್ವ. ಆರೋಪಿಯ ಮನೆ ಜಮಖಂಡಿಯ ಅಶೋಕ ಸರ್ಕಲ ಬಳಿ ಇದೆ ಎಂದರೆ ಸರಿ. ನನ್ನ ಹೆಂಡತಿಯ ತವರು ಮನೆ ಅಶೋಕ ಸರ್ಕಲ ಬಳಿ ಇದೆ ಎಂದರೆ ಸರಿ. ನನ್ನ ಮನೆ ಹುನ್ನೂರ ಕೆರೆ ಹತ್ತಿರ ಇದೆ ಎಂದರೆ ಸರಿ. ನನ್ನ ಮಗ ಡಾಕ್ಟರ ಎಂದರೆ ಸರಿ. ನನ್ನ ಮಗನ ಹೆಂಡತಿ ನನ್ನ ಮಗ, ನನ್ನ ಮೇಲೆ ಹಾಗೂ ನನ್ನ ಹೆಂಡತಿಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ನನ್ನ ಮಗ ಬೇರೆವಾಸವಾಗಿರುತ್ತಾನೆ ಎಂದರೆ ಸರಿ. ಆರೋಪಿ ನನಗೆ ಸುಮಾರು 15 ವರ್ಷಗಳಿಂದ ಪರಿಚಯ ಎಂದರೆ ಸರಿ. ಆರೋಪಿತನಗೆ ಹಣದ ಅವಶ್ಯಕತೆ ಇದ್ದಾಗಲೆಲ್ಲಾ ನನ್ನ ಹತ್ತಿರ ತೆಗೆದುಕೊಳ್ಳುವುದು ಕೊಡುವುದು ಮಾಡುತ್ತಿದ್ದ. ನಾನು ಬಡ್ಡಿಗೆ ಕೊಡುತ್ತಿದ್ದೆ ಎಂದರ ಸರಿಯಲ್ಲ. ಆರೋಪಿ ಸುಮಾರು 5–6 ವರ್ಷಗಳ ಹಿಂದೆ ನನಗೆ ರೂ.1,00,000/– ಹಣದ ಅವಶ್ಯಕತೆ ಇತ್ತು ಎಂದರೆ ಸರಿ. ಸಾಕ್ಷಿಮುಂದುವರಿದು ರೂ.1,00,000/– ಅಲ್ಲ ರೂ.1,50,000/– ಹಣ ಕೇಳಿದ್ದ.

ಆರೋಪಿ ಅಳಿಯ ಅರ್ಜುನ ನಾರಾಯಣ ಪಣಾರ ಅವರ ಮನೆ ಆಸ್ತಿ ನಂ. 5115/7/1ಬಿ ಇದನ್ನು ಕರಾರು ಪತ್ರ ಮಾಡಿಕೊಟ್ಟು ರೂ.1,00,000/– ಹಣ ತೆಗೆದುಕೊಂಡು ಹೋದರು ಎಂದರೆ ಸಾಕ್ಷಿ ಆ ವ್ಯವಹಾರ ಬೇರೆ ಈ ವ್ಯವಹಾರ ಬೇರೆ ಎಂದು ನುಡಿಯುತ್ತಾರೆ. ದಿನಾಂಕಃ 08.02.2017 ರಂದು ಖರೀದಿ ಕರಾರು ಪತ್ರ ಆಗಿತ್ತು ಎಂದರೆ ನೆನಪಿಲ್ಲ, ಸಾಕ್ಷಿ ಆ ವ್ಯವಹಾರ ಬೇರೆ, ಈ ವ್ಯವಹಾರ ಬೇರೆ ಎಂದುನುಡಿಯುತ್ತಾರೆ. ದಿನಾಂಕಃ 28.06.2021 ರಂದು ರೂ.1,00,000/– ಹಣವನ್ನು ತೆಗೆದುಕೊಂಡು ಹೋಗಿ ಪುರವಣಿ ಕರಾರು ಪತ್ರ ಬರೆದುಕೊಟ್ಟರು ಎಂದರೆ ಸರಿಯಲ್ಲ. ದಿನಾಂಕಃ 10.04.2019 ರಂದು ರೂ.2,00,000/– ಹಣ ತೆಗೆದುಕೊಂಡು ಮತ್ತೊಂದು ಪುರವಣಿ ಕರಾರು ಪತ್ರ ಬರೆದುಕೊಟ್ಟರು ಎಂದರೆ ಸರಿಯಲ್ಲ. ಈ ರೀತಿ ಒಟ್ಟು ರೂ.4,0,000/– ಹಣವನ್ನು ನನ್ನ ಕಡೆಯಿಂದ ತೆಗೆದುಕೊಂಡು ಹೋದರು ಎಂದರೆ ಸಾಕ್ಷಿ ಆ ವ್ಯವಹಾರ ಬೇರೆ, ಈ ವ್ಯವಹಾರ ಬೇರೆ ಎಂದು ನುಡಿಯುತ್ತಾರೆ.

ಆರೋಪಿ ವೀಣಾ ಪಣಾಳಕಾರ ಹಾಗೂ ಬಸವರಾಜ ಶಿರೋಳ ಇವರ ಸಮಕ್ಷಮ ರೂ.3,20,000/– ಬಗೆಹರಿಯಿತು ಎಂದರೆ ಸರಿ. ಸಾಕ್ಷಿ ಮುಂದುವರಿದು ಅರ್ಜುನ ಪಣಾಳಕರ ಅವರಿಗೆ ಕರಾರು ಪತ್ರ ಬರೆದುಕೊಟ್ಟಿದ್ದರು, ಆ ವ್ಯವಹಾರ ಈ ವ್ಯವಹಾರ ಬೇರೆ ಎಂದು ನುಡಿಯುತ್ತಾರೆ. ಆರೋಪಿ ಹೆಸರಿಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ಆರೋಪಿ

ಸಂತೆಯಲ್ಲಿ ಸಣ್ಣ ಪುಟ್ಟ ವ್ಯಾಪಾರ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ಆರೋಪಿ 5 ರ ಬಡ್ಡಿಗೆ ಹಿರಿಯರ ಸಮಕ್ಷಮ ಆಸ್ತಿಯನ್ನು ಬಿಡಿಸಿಕೊಂಡ ಎಂದರೆ ಸರಿಯಲ್ಲ. ದಿನಾಂಕಃ 17.10.2022 ರಂದು ಕರಾರು ಬದ್ದ ಪತ್ರವನ್ನು ನಾನು ಬರೆದುಕೊಟ್ಟಿದ್ದೇನೆಎಂದರೆ ಆ ವ್ಯವಹಾರ ಬೇರೆ ಈ ವ್ಯವಹಾರ ಬೇರೆ ಎಂದು ನುಡಿಯುತ್ತಾರೆ.

ಆರೋಪಿಗೆ ಯಾವ ತಿಂಗಳಿನಲ್ಲಿ ಹಣ ನೀಡಿದೆ ಎಂದು ನೆನಪಿಲ್ಲ. ನಾನು ಬಡ್ಡಿಗೆ ಹಣ ನೀಡಿಲ್ಲ. ನಾನು ಆರೋಪಿಗೆ ಹಣ ನೀಡುವಾಗ ಯಾರೂ ಇರಲಿಲ್ಲ. ಮೊದಲು ರೂ.60000/- ಹಣವನ್ನು ಆರೋಪಿಗೆ ನೀಡಿರುತ್ತೇನೆ. ನಂತರ ಉಳಿದ ಹಣವನ್ನು ಒಂದೂವರೆ ತಿಂಗಳಿನಲ್ಲಿ ನೀಡಿರುತ್ತೇನೆ. ಆರೋಪಿಗೆ ಹಣವನ್ನು ವಿಶ್ವಾಸದ ಮೇಲೆ ಕೊಟ್ಟಿರುತ್ತೇನೆ. ಎಷ್ಟು ನೋಟುಗಳು ಇದ್ದವು ಎಂದು ಈ ಕಾಲಕ್ಕೆ ನೆನಪಿಲ್ಲ. ರೂ.200/- ಹಾಗೂ ರೂ.500/- ಮುಖಬೆಲೆಯ ನೋಟುಗಳನ್ನು ನೀಡಿದ್ದೇನೆ. ಆರೋಪಿ 4 ತಿಂಗಳ ಒಳಗಾಗಿ ಮರಳಿ ಹಣವನ್ನು ನೀಡುತ್ತೇನೆ ಎಂದು ಹೇಳಿದ್ದ. ಹಣದ ಭದ್ರತೆಗಾಗಿ ಯಾವುದೇ ಕಾಗದ ಪತ್ರ ಬರೆಸಿಕೊಂಡಿಲ್ಲ. ಆರೋಪಿಯ ಮೇಲಿನ ವಿಶ್ವಾಸದ ಮೇಲೆ ಕೊಟ್ಟಿರುತ್ತೇನೆ.

ನಾನು ಆರೋಪಿಗೆ ಹಣ ನೀಡಿದ 15 ದಿನಗಳ ನಂತರ ನನಗೆ ಚೆಕ್ಕು ನೀಡಿರುತ್ತಾನೆ. ಚೆಕ್ಕು ನಂಬರ ನೆನಪಿಲ್ಲ. ಅದರ ಮೇಲೆ ಆರೋಪಿಯೇ ಬರೆದಿರುತ್ತಾನೆ. ಚೆಕ್ಕು ಹಾಕಿದ ದಿನಾಂಕ ನೆನಪಿಲ್ಲ. ವಕೀಲರ ಮುಖಾಂತರ ಆರೋಪಿಗೆ ಯಾವಾಗ ಎಷ್ಟು ನೋಟೀಸುನೀಡಿರುತ್ತೇನೆ ನೆನಪಿಲ್ಲ. ನೋಟೀಸಿನಲ್ಲಿ ಏನು ಬರೆದಿದೆ ಇದೆ ಎಂದುಗೊತ್ತಿಲ್ಲ. ಹಣ ವಾಪಸ್ಸು ನೀಡುವಂತೆ ಕೇಳಿ ನಾನು ನೋಟೀಸು ನೀಡಿರುತ್ತೇನೆ.

**ಮುಂದುವರಿದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದು ಸಮಯ ನೀಡಿ ಮುಂದೂಡಲಾಯಿತು**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.